ಲಕ್ಷ್ಮಿಯ ಸಹಾಯಕ್ಕೆ ಕೊಂಡಯ್ಯ ಒಬ್ಬ ಹೆಣ್ಣಾಳನ್ನು ಕಳಿಸ್ತಾರಂತೆ. ಅವಳ ಬಟ್ಟೆ, ಬರೆ ಇತ್ಯಾದಿ ಲಗೇಜು ಸಮೇತ ಅವಳನ್ನು ನಾನೇ ಕರಕೊಂಡು ಬರ್ತೀನಿ ಅಂತ ಬಾಲಗೋವಿಂದ ಹೇಳಿದ. ನಮ್ಮ ಕೆಲಸ ಸದ್ಯಕ್ಕೆ ಮುಗಿಯಲ್ಲ ಅಂತ ಪೆದ್ದಾಯನ ಹೇಳಿದ್ದಾರೆ. ಇನ್ನೂ ಸ್ವಲ್ಪ ದಿನ ಇಲ್ಲೇ ಇರಬೇಕಾಗುತ್ತೆ ಅಂತ ಹೇಳುತ್ತ ಮುತ್ಯಾಲನ ಕೈಗೂ ಸ್ವಲ್ಪ ಹಣ ಕೊಟ್ಟ. ಮತ್ತೆ ಬರ್ತೀನಿ ಎನ್ನುತ್ತ ಆಟೊ ಸ್ಟಾರ್ಟ್ ಮಾಡಿಕೊಂಡು ಹೊರಟೇ ಹೋದ.

★★★

ಕ್ರೈಂ ಮೀಟಿಂಗ್ ನೆಪದಲ್ಲಿ ಎಸ್‌ಪಿ ಸಾಹೇಬರು ಎರಡು ದಿನಕ್ಕೊಮ್ಮೆ ಎಸಿಪಿ, ಸಿಐಗಳನ್ನು ಕರೆಸಿಕೊಂಡು ಮಾಹಿತಿ ಕೇಳ ತೊಡಗಿದರು.

ಪಕ್ಕದ ರಾಜ್ಯದಿಂದ ಮೂವತ್ತು ಮಂದಿ ಇಂಟೆಲಿಜೆನ್ಸ್ ಸ್ಟಾಫ್ ಬಂದಿದ್ದಾರೆ. ಯಾರೂ ನನ್ನನ್ನು ಭೇಟಿ ಮಾಡಿಲ್ಲ. ಅವರು ನಿಮ್ಮನ್ನೂ ಭೇಟಿ ಮಾಡಲ್ಲ. ಅವರು ಕೆಲಸ ಶುರು ಮಾಡಿದ್ದಾರೆ. ಅವರೆಲ್ಲ ರಾಘವನ್ ಸಾಹೇಬರಿಗೆ ರಿಪೋರ್ಟ್ ಮಾಡಿಕೊಳ್ತಾರೆ. ಅವರಿಂದ ನಮಗೆ ಮಾಹಿತಿ ಬರುತ್ತೆ. ರೈಡು, ಅರೆಸ್ಟ್ ಮಾಡಬೇಕು ಅಂತಾದರೆ ನಮಗೆ ಹೇಳ್ತಾರೆ... ಆಗ ನಾವು ಹೋಗಬೇಕು. ಅದಕ್ಕೆ ಎಲ್ಲರೂ ಸಿದ್ಧವಾಗಿರಬೇಕು.

ಕಮಿಷನರ್ ಸಾಹೇಬರು, ಸೋಷಿಯಲ್ ಪೊಲೀಸಿಂಗ್ ಹೆಸರಿನಲ್ಲಿ ಸಂಘ ಸಂಸ್ಥೆಗಳ ಜತೆ ಸಂಪರ್ಕದಲ್ಲಿದ್ದಾರೆ. ಬುಲೆಟ್ ಇಂಜರಿಗೆ ಸರ್ಜರಿ ಮಾಡಿದ ಒಂದೇ ಒಂದು ಕೇಸು ನಮ್ಮಲ್ಲಿ ಇಲ್ಲ ಅಂತ ಎಲ್ಲ ಖಾಸಗಿ ಆಸ್ಪತ್ರೆಗಳವರು ಲಿಖಿತವಾಗಿ ತಿಳಿಸಿದ್ದಾರೆ. ಮೆಡಿಕಲ್ ಕಾಲೇಜು ಆಸ್ಪತ್ರೆಗಳಿಂದ ಮಾಹಿತಿ ಬಂದಿಲ್ಲ. ಇವತ್ತು ಅಥವಾ ನಾಳೆ ಬರಬಹುದು. ರಾಘವನ್ ಸಾಹೇಬರಿಗೆ ಸಿಕ್ಕಿರೋ ಮಾಹಿತಿ ತಪ್ಪಿರಬಹುದು. ಆದರೂ ನಾವು ಎಚ್ಚರಿಕೆಯಿಂದ ಇರಬೇಕು ಎಂದು ಪದೇ ಪದೇ ಹೇಳಿದರು.

ಇನ್ನೂ ಒಂದು ತಿಂಗಳು ಕಳೆಯಿತು. ಪ್ರದೀಪ್ ಪುರಿ ಸಾಹೇಬರು ವಾರಕ್ಕೊಮ್ಮೆ ಎಸ್‌ಪಿಯನ್ನು ಕರೆಸಿಕೊಂಡು ಪರಿಸ್ಥಿತಿಯ ಪರಾಮರ್ಶೆ ಮಾಡಿದರು.

## ಭಾಗ-3

ಬೇಸಿಗೆ ಕಾಲೂರಿತು. ದಿನ ಕಳೆದಂತೆ ಬಿಸಿಲು ಏರತೊಡಗಿತು. ಹಗಲು ಹನ್ನೊಂದರ ಹೊತ್ತಿಗೆಲ್ಲ ಬಿಸಿಲ ಝಳದ ಜತೆಗೆ ಕುಚ್ಚುವಂಥ ಸೆಖೆ. ನೆಲ ಬೆಂದು ಹಬೆಯಾಡತೊಡಗಿತು. ಹತ್ತಾರು ಬೇಸಿಗೆಗಳನ್ನು ಕಂಡವರೂ ತತ್ತರಿಸಿಹೋದರು. ಸರ್ಕಾರಿ ಕಚೇರಿಗಳ ವೇಳೆ ಬದಲಾಯಿತು. ಬೇಸಿಗೆಯಲ್ಲಿ ಕ್ರೈಂಗಳ ಸಂಖ್ಯೆ ಕಡಿಮೆ. ಆದರೂ ಪೊಲೀಸರಿಗೆ ಓಡಾಟ ತಪ್ಪಲಿಲ್ಲ. ರಾಘವನ್ ಸಾಹೇಬರು ಹೇಳಿದ್ದ ಸೊಫೆಸ್ಟಿಕೇಟೆಡ್ ವೆಪನ್‌ಗಳಿಗಾಗಿ ಹುಡುಕಾಟ ನಿಲ್ಲಲಿಲ್ಲ. ಹೊರಗಿನಿಂದ ಬಂದ ಇಂಟೆಲಿಜೆನ್ಸ್ ಸಿಬ್ಬಂದಿಯಲ್ಲಿ ಕೆಲವರು ವಾಪಸ್ ಹೋದರು.

ರಾಘವನ್ ಕೊಟ್ಟ ಮಾಹಿತಿ ಸುಳ್ಳಿರಬಹುದೇ ಅಂತ ಪುರಿ ಸಾಹೇಬರಿಗೆ ಅನ್ನಿಸಲು ಶುರುವಾಯಿತು. ವೆಪನ್‌ಗಳನ್ನು ಬಸ್ಸು, ರೈಲುಗಳಲ್ಲಿ ತಂದಿರುವ ಸಾಧ್ಯತೆ ಕಡಿಮೆ. ಹೊರರಾಜ್ಯಗಳಿಂದ ಸರಕು ಹೊತ್ತು ಬರುವ ಲಾರಿ ಅಥವಾ ಟ್ರಕ್‌ಗಳಲ್ಲಿ ತಂದಿರುವ ಸಾಧ್ಯತೆ ಇದೆ ಅಂತ ಅನ್ನಿಸಿತು. ಲಾಜಿಸ್ಟಿಕ್ ಕಂಪನಿಗಳ ಮೇಲೆ ಕಣ್ಣಿಡುವಂತೆ ಸೂಚಿಸಿದರು. ವಾಣಿಜ್ಯ ತೆರಿಗೆ ಅಧಿಕಾರಿಗಳನ್ನು ಕರೆಸಿಕೊಂಡು ಕಾಟನ್ ಮಿಲ್‌ಗಳು ಮತ್ತು ಲಾಜಿಸ್ಟಿಕ್ ಕಂಪನಿಗಳ ಮಾಹಿತಿ ಕೇಳಿ ತರಿಸಿಕೊಂಡರು.

ಕೆಲವು ಕಾಟನ್ ಮಿಲ್‌ಗಳವರು ಯಂತ್ರಗಳ ಬಿಡಿ ಭಾಗಗಳನ್ನು ಹೊರಗಿನಿಂದ ತರಿಸುತ್ತಾರೆ ಎನ್ನುವ ಅಂದಾಜಿನ ಮೇಲೆ ಪ್ರಮುಖ ಲಾರಿ ಕಂಪನಿಗಳ ಮಾಲೀಕರನ್ನು ಒಬ್ಬೊಬ್ಬರನ್ನೇ ಕರೆಸಿ